# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ 78-2020** **ಸಿ. ಡಬ್ಲ್ಯೂಃ 02**

**ಪಿ. ಡಬ್ಲ್ಯೂಃ 02**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ / ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ಆರ್.ಮಹೇಶ್<br>ಲೇ.ಹೆಚ್.ರಂಗಯ್ಯ<br>46 ವರ್ಷ<br>ಶಿರಸ್ತೇದಾರರು, ಕಂದಾಯ ಇಲಾಖೆ.<br>ನಂಜನಗೂಡು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 06-11-2024** |

**ಮುಖ್ಯ ವಿಚಾರಣೆಃ  ಶ್ರೀ ಎಪಿಪಿ  ವಕೀಲರಿಂದಃ**

ನಾನು 2014 ರಿಂದ 2019 ರವರೆಗೆ ದೊಡ್ಡಕವಲಂದೆ ಮತ್ತು ಚಿಕ್ಕಯ್ಯನಛತ್ರ ಹೋಬಳಿಯ ರಾಜಸ್ವ ನಿರೀಕ್ಷಕನಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.20/09/2019 ರಂದು ಬೆಳಗ್ಗೆ ಸುಮಾರು 11.00 ರಿಂದ 11.30 ಗಂಟೆ ಸಮಯದಲ್ಲಿ ನಾನು ಚಾಸಾ-1 ರವರ ಕೊಠಡಿಯಲ್ಲಿ ನನ್ನ ಹೋಬಳಿಗೆ ಸಂಬಂಧಿಸಿದ ಕಡತಗಳ ಬಗ್ಗೆ ಚರ್ಚಿಸುತ್ತಿದ್ದಾಗ ಒಬ್ಬ ವ್ಯಕ್ತಿ ಕೊಠಡಿಯ  ಬಾಗಿಲನ್ನು ತಳ್ಳಿ ಒಳಗೆ ಬಂದನು, ಆತ ಏರುಧ್ವನಿಯಲ್ಲಿ ಮಾತನಾಡುತ್ತಾ ನಾನು ಜಿ.ಮರಳ್ಳಿ ಗ್ರಾಮದ  ಮಂಜುನಾಥ್  ತಾನು ರೈತ ಮುಖಂಡ ಎಂದು ಕೂಗಾಡುತ್ತಿದ್ದನು. ಸೌಜನ್ಯದಿಂದ ವರ್ತಿಸುವಂತೆ ನಾನು ಮತ್ತು ಚಾಸಾ-1 ರವರು ಕೇಳಿಕೊಂಡರು

ಆತನ ವಿನಾಕಾರಣ ಕೂಗಾಡಿ ಚಾಸಾ–1 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿದನು. ಆಗ ನಾನು ಮತ್ತು ಚಾಸಾ–3 ರಿಂದ 6 ರವರು ಸೇರಿಕೊಂಡು ಆರೋಪಿಯನ್ನು ಆ ರೀತಿ ವರ್ತಿಸದಂತೆ ಮತ್ತು ತಹಶೀಲ್ದಾರ್ ರವರ ಕರ್ತವ್ಯಕ್ಕೆ ಅಡಿಪಡಿಸಿದಂತೆ ಕೊಠಡಿಯಿಂದೆ ಹೊರಗೆ ಕಳುಹಿಸಿದೆವು. ಈ ಸಂಬಂಧ ಪೊಲೀಸರಿಗೆ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ವೈ ವಕೀಲರಿಂದಃ</u>**

ನಾನು ಈ ಘಟನ ನಡೆದ ಸಮಯ ಚಿಕ್ಕಯ್ಯನಛತ್ರ ಹೋಬಳಿಯ ರಾಜಸ್ವ ನಿರೀಕ್ಷಕನಾಗಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ಜಿ.ಮರಳ್ಳಿ ಗ್ರಾಮವು ನನ್ನ ಹೋಬಳಿ ವ್ಯಾಪ್ತಿಗೆ ಬರುವುದಿಲ್ಲ, ಅದು ಬಿಳಿಗೆರೆ ಹೋಬಳಿಯ ವ್ಯಾಪ್ತಿಗೆ ಸೇರುತ್ತದೆ ಎಂದರೆ ಸರಿ. ಬಿಳಿಗೆರೆ ಹೋಬಳಿಯ ರೈತರು ಯಾವ ಸಮಸ್ಯೆ ನಿಮಿತ್ತ ತಹಶೀಲ್ದಾರ್ ರವರನ್ನು ಭೇಟಿ ಮಾಡಿದರು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಘಟನಾ ದಿನಾಂಕದಂದು ನಮ್ಮ ಹೋಬಳಿಯ ಆಶ್ರಯ ಯೋಜನೆಗೆ ಸಂಬಂದಿಸಿದಂತೆ ಚರ್ಚಿಸುವ ಉದ್ದೇಶದಿಂದ ಚಾಸಾ–1 ರವರು ನನ್ನನ್ನು ಕರಸಿಕೊಂಡಿದ್ದರು. ಘಟನಾ ಸಮಯ ಚಾಸಾ–1 ರವರ ಕೊಠಡಿಯಲ್ಲಿ ನಾನು, ಚಾಸಾ–1,4 ಮತ್ತು 5 ಇದ್ದೆವು.

2. ತಹಶೀಲ್ದಾರ್ ರವರ ಕಚೇರಿಯಲ್ಲಿ ಸಿ.ಸಿ ಟಿವಿಯನ್ನು ಅಳವಡಿಸಿರುತ್ತಾರೆ ಎಂದರೆ ಸರಿ. ಸದರಿ ಸಿ.ಸಿ ಟಿವಿಯಲ್ಲಿ ಘಟನಾ ದಿನಾಂಕದಂದು ನಾವುಗಳು ಕೊಠಯಲ್ಲಿ ಇದ್ದ ಬಗ್ಗೆ ಮತ್ತು ಘಟನೆಯ ಬಗ್ಗೆ ಚಿತ್ರಿತವಾಗಿರುತ್ತದೆ ಎಂದರೆ ನಾನು ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಘಟನಾ ದಿನಾಂಕದಂದು ನಾನು ಚಾಸಾ-1 ರವರ ಕೊಠಡಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಘಟನಾ ದಿನಾಂಕದಂದು ಆರೋಪಿಯು ಚಾಸಾ-1 ರವರ ಕೊಠಡಿಗೆ ಬಂದು ಏರುಧ್ವನಿಯಲ್ಲಿ ಮಾತನಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಏರುಧ್ವನಿಯಲ್ಲಿ ಮಾತನಾಡದಂತೆ ತಿಳುವಳಿಕೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರ್ ರವರ ಕೊಠಡಿಗೆ ಪ್ರವೇಶ ಮಾಡಬೇಕಾದರೆ ಜವಾನನ ಅನುಮತಿ ಪಡೆದು ಒಳಗೆ ಪ್ರವೇಶಿಸಬೇಕು ಎಂದರೆ ಸರಿ. ನಾನು ಹೇಳುವಂತೆ ಆರೋಪಿಯು ಕೂಗಾಡಿ ಚಾಸಾ-1 ರವರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರ್ ರವರು ಕಂದಾಯಿ ಇಲಾಖೆಯ ಮುಖ್ಯಸ್ಥರಾಗಿರುವುದರಿಂದ ಅವರಿಗೆ ಕೆಲಸದ ಒತ್ತಡ ಇರುತ್ತದೆ ಎಂದರೆ ಸರಿ. ಘಟನಾ ದಿನಾಂಕದಂದು ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ, ಆರೋಪಿಯು ತನ್ನ ಜಮೀನಿಗೆ ಹೋಗುವ ರಸ್ತೆಯ ವಿಚಾರಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ್ ರವರ ಬಳಿ ಚರ್ಚಿಸಲು ಬಂದಾಗ ಚಾಸಾ-1 ರವರೇ ಆರೋಪಿಯ ಮೇಲೆ

ರೇಗಾಡಿ ಕಚೇರಿಯಿಂದ ಹೊರಗೆ ಹೋಗುವಂತೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯ ನಾನು ಚಾಸಾ–1 ರವರ ಕೊಠಡಿಯಲ್ಲಿ ಇರಲಿಲ್ಲ, ಆನಂತರ ನಾನು ಘಟನೆ ಬಗ್ಗೆ ತಿಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ತನ್ನ ಜಮೀನಿಗೆ ಹೋಗುವ ರಸ್ತೆ ವಿಚಾರವಾಗಿ ಹಲವಾರುಭಾರಿ ಚಾಸಾ–1 ರವರಿಗೆ ಅರ್ಜಿ ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ಆರೋಪಿಗೂ ಚಾಸಾ–1 ರವರಿಗೂ ಯಾವ ವಿಚಾರಕ್ಕೆ ಮಾತುಕತೆ ಆಯಿತು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹೇಳುವಂತೆ ಚಾಸಾ–4 ಮತ್ತು 5 ರವರು ಬಂದು ಸಮಾಧಾನ ಪಡಿಸಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಚಾಸಾ–1 ರವರು ನನ್ನ ಮೇಲಾಧಿಯಾಗಿರುವುದರಿಂದ ಅವರ ಕೋರಿಕೆ ಮೇರೆಗೆ ವಾಸ್ತವಾಂಶಕ್ಕೆ ವಿರುದ್ಧವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸಂಬಂಧ ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಕಿ.ಪ್ರ.ದ. ನ್ಯಾ. ದಂ. ನಂಜನಗೂಡು**